4. ಶಾಸನ ರಚನೆ

ಅ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕ 2004

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಈ ಕಾಕಂಬಿ ನಿಯಂತ್ರಣ ವಿಧೇಯಕ, 2004 ಹಿಂದೆ ಎರಡೂ ಮನೆಗಳಲ್ಲೂ ಅಂಗೀಕಾರವಾಗಿ ಹೋಗಿತ್ತು. ರಾಷ್ಟ್ರಪತಿಗಳು ಕೆಲವೊಂದು observation ಮಾಡಿ ಅದನ್ನು ವಾಪಸ್ ಕಳುಹಿಸಿಕೊಟ್ಟಿದ್ದಾರೆ. ಆ ಮನೆಯಲ್ಲಿ ಇದಕ್ಕೆ approval ಸಿಕ್ಕಿದೆ, ಇಲ್ಲಿ ಸಿಗಬೇಕಾಗಿದೆ. ವಿಷಯವಿಷ್ಟೇ, ಬದಲಾವಣೆ ಯಾವುದು ಎಂದರೆ, ಅಧಿನಿಯಮದ ಅಧ್ಯಾಯ- IIIರ ಅಪರಾಧಗಳು ಮತ್ತು ದಂಡನೆಗಳು ಶೀರ್ಷಿಕೆಯ 23(2)ನೇ ಉಪ ವಿಧಿಯಲ್ಲಿ ಅಪರಾಧಿಗಳಿಗೆ ನಿರ್ದಿಷ್ಟವಾಗಿ ವಿಧಿಸಬಹುದಾಂತಹ ದಂಡನೆ ಆರು ತಿಂಗಳುಗಳಿಗೆ ಎಂಬುದಕ್ಕೆ ಬದಲಾಗಿ ಒಂದು ವರ್ಷಕ್ಕೆ ಎಂದು ತಿದ್ದುಪಡಿ ಮಾಡಬಹುದು ಎಂಬುದಾಗಿ ರಾಷ್ಟ್ರಪತಿಗಳು observation ಮಾಡಿ ಈ ಬಿಲ್ ಅನ್ನು ವಾಪಸ್ ಕಳುಹಿಸಿಕೊಟ್ಟಿದ್ದಾರೆ. ಸದರಿ ಬದಲಾವಣೆ ಕಳೆದ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಅನುಮೋದನೆಯಾಗಿದ್ದು, ವಿಧಾನ ಸಭೆಯಲ್ಲಿ ಅನುಮೋದನೆ ಆಗಬೇಕಾಗಿರುತ್ತದೆ. ದಯಮಾಡಿ ಇದನ್ನು ಅನುಮೋದನೆ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಪ್ರಸ್ತಾಪವನ್ನು ಮಂಡಿಸುತ್ತೇನೆ.

ಪರ್ಯಾಲೋಚನಾ ಪ್ರಸ್ತಾವ

"ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಭಾರತದ ರಾಷ್ಟ್ರಾಧ್ಯಕ್ಷರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಂತೆ ಹಾಗೂ ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಎರಡನೇ ಬಾರಿಗೆ ಅಂಗೀಕಾರವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಉಪಾಧ್ಯಕ್ಷರು: ಎಕ್ಸ್‌ಪ್ಲೈನ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾಡುತ್ತೇನೆ ಸಾರ್. ಈಗಾಗಲೇ ಅವರಿಗೆ convince ಆಗಿದೆ. ಏನಿಲ್ಲ, ಆರು ತಿಂಗಳು ಎಂದು ಇದ್ದಂತಹ ಶಿಕ್ಷೆಯನ್ನು ಒಂದು ವರ್ಷವೆಂದು ಮಾಡುವಂತಹ ತಿದ್ದುಪಡಿ ಇದಾಗಿದೆ. ಆ ಮನೆಯಲ್ಲಿ ಇದು ಒಪ್ಪಿಗೆಯಾಗಿದೆ, ಈ ಮನೆಯಲ್ಲಿ ಇದು ಒಪ್ಪಿಗೆಯಾಗಬೇಕಾಗಿದೆ.

ಉಪಾಧ್ಯಕ್ಷರು: ಈಗ ಪರ್ಯಾಲೋಚನೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.....

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, detailed Bill ಅನ್ನು ಏಕೆ ಇಟ್ಟಿದ್ದಾರೆ? Amendment ಅಷ್ಟನ್ನೇ ತರಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ: ಸಾಮಾನ್ಯ ಪದ್ಧತಿಯಂತೆ ಇದನ್ನು ತಂದಿದ್ದೇನೆ. ಈ ಹಿಂದೆ clause 23ರಲ್ಲಿ ತಿಳಿಸಿರುವ ಅಪರಾಧಗಳಿಗೆ 6 ತಿಂಗಳ ಸಜೆ ಮತ್ತು 1000 ಸಾವಿರ ರೂಪಾಯಿಗಳಿಗೆ ಕಡಿಮೆಯಾಗದಂತೆ ದಂಡ ವಿಧಿಸಲು ಒಪ್ಪಲಾಗಿತ್ತು.

ಶ್ರೀ ಎನ್. ಧರ್ಮಸಿಂಗ್: ವಿಧೇಯಕದ ಉದ್ದೇಶವೇನೆಂದು ದಯವಿಟ್ಟು explanation ಕೊಡಿ.

ಶ್ರೀ ಬಿ.ಎನ್. ಯಡಿಯೂರಪ್ಪ: ಹೇಳುತ್ತೇನೆ ಸಾರ್, ದಯವಿಟ್ಟು ಒಂದು ನಿಮಿಷ ಟೈಮ್ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು 'ಉದ್ದೇಶಗಳು ಮತ್ತು ಕಾರಣಗಳು ಇದರಲ್ಲಿ ಎಲ್ಲವನ್ನೂ ಹೇಳಿದ್ದೀರಿ. ರಾಷ್ಟ್ರಪತಿಗಳು ವಾಪಸ್ಸು ಕಳುಹಿಸಿದ್ದಾರೆ, ಇದೊಂದೇ ಕಾರಣಕ್ಕಾಗಿ Bill amendment ತರುತ್ತಿದ್ದೇವೆ ಎಂದು ತಾವು ಎಲ್ಲೂ ಹೇಳಿಲ್ಲ. 'ಉದ್ದೇಶ ಮತ್ತು ಕಾರಣಗಳು' ಹೇಳಬೇಕಾದರೆ, ಒಂದು ಪುಟದಷ್ಟು ಹೇಳಿದ್ದೀರಿ. ಅದರ ಅಗತ್ಯ ಇತ್ತೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಮುಂಬರುವ ದಿವಸಗಳಲ್ಲಿ ಈ ರೀತಿ ಕೊರತೆಯಾಗದಂತೆ ನಾನು ನೋಡಿಕೊಳ್ಳುತ್ತೇನೆ.

Sri J.C. Madhuswamy: Original Bill pass ಆಗಿದ್ದರಲ್ಲಿ 6 ತಿಂಗಳಿನಿಂದ ಒಂದು ವರ್ಷಕ್ಕೆ ಎಂದು amendment ಅನ್ನು ತಾವು ಈಗ ತಂದಿದ್ದೀರಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಹೌದು ಸರ್, ಅದನ್ನು ಬಿಟ್ಟು ಬೇರೇನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಆದರೆ ನೀವು ಇದನ್ನು as if it is a new Bill ಎನ್ನುವಂತೆ Assembly ಗೆ ನೀವು introduce ಮಾಡಿದ್ದೀರಿ. 'ಉದ್ದೇಶ ಮತ್ತು ಕಾರಣಗಳು' ಇದರಲ್ಲಿ ನೀವು ಏನೇನು ಹೇಳಿದ್ದೀರಿ ಎಂಬುದನ್ನು ತಾವೇ ಓದಿ ನೋಡಿ. ನಾವು ಅದನ್ನೆಲ್ಲಾ ಈಗ question ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಈಗ ನೀವು ಕೊಟ್ಟಿರುವುದು ಸಾಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಬಿಲ್‌ನಲ್ಲಿ ತಾವು ಕೊಟ್ಟಿರುವ explanation ಅನ್ನು ಇಲ್ಲಿ ತಾವು ನಮಗೆ ಓದಿಬಿಡಿ ಸಾಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ದಯವಿಟ್ಟು ಮೇಲೆ ನೋಡಿ ಸಾರ್. ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಭಾರತದ ರಾಷ್ಟ್ರಾಧ್ಯಕ್ಷರಿಂದ ಪುನರ್ ಪರಿಗಣನೆಗೆ ಹಿಂತಿರುಗಿಸಲ್ಪಟ್ಟಂತೆ ಹಾಗೂ ವಿಧಾನಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಎರಡನೇ ಬಾರಿಗೆ ಅಂಗೀಕಾರದ ರೂಪದಲ್ಲಿ ನಾವು ಇದನ್ನು ತಂದಿದ್ದೇವೆಂದು ಮೇಲೆಯೇ ಹೇಳಿದ್ದೇವೆ.

Sri J.C. Madhuswamy: While presenting this Bill ಈ explantion ಮತ್ತೆ ತಾವು ಕೊಡಬಾರದಾಗಿತ್ತು. It is an amendment to the original Bill passed ಎಂದು ನೀವು ಹೇಳಬೇಕಾಗಿತ್ತು ರಾಷ್ಟ್ರಪತಿಗಳು ಇಷ್ಟು ಮಾತ್ರ ಹೇಳಿ ವಾಪಸ್ಸು ಕಳುಹಿಸಿದ್ದಾರೆಂದು ನೀವು ಹೇಳಬೇಕಾಗಿತ್ತು. ಈಗ entire Bill ಅನ್ನು ತಾವು ಈಗ ಇಲ್ಲಿ ಚರ್ಚೆ ಮಾಡಬಹುದಾಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಹಾಗಲ್ಲ. ತಾವು ಇಲ್ಲಿ ಗಮನಿಸಬೇಕಾದುದು ಏನೆಂದರೆ Billಗೆ amendment ಅನ್ನು ತರಲಿಕ್ಕೆ ಬರುವುದಿಲ್ಲ. ಯಾವುದಾದರೂ enactment ಆಗಿದ್ದಲ್ಲಿ ನಾವು ಅದಕ್ಕೆ ತಿದ್ದುಪಡಿಗಳನ್ನು ತರಬಹುದಾಗಿತ್ತು. ರಾಷ್ಟ್ರಪತಿಗಳು ತಮ್ಮ ಅಂಕಿತವನ್ನು ನೀಡದಿರುವುದರಿಂದ ಇದು ಇನ್ನೂ ಕಾನೂನು ಆಗಿಲ್ಲ. ಅದು ಇನ್ನೂ ಮಸೂದೆ ರೂಪದಲ್ಲಿಯೇ ಇದೆ. ಮಸೂದೆ ರೂಪದಲ್ಲಿರುವುದಕ್ಕೆ ನಾವು ತಿದ್ದುಪಡಿ ತರಲಿಕ್ಕೆ ಆಗುವುದಿಲ್ಲ. ಆ ಕಾರಣಕ್ಕಾಗಿಯೇ ಈಗ ಅದನ್ನು ಅದು ಯಾವ ರೀತಿಯಲ್ಲಿ ಇತ್ತೋ ಅದೇ ರೀತಿಯಲ್ಲಿ ಅವರು ಅದನ್ನು ಇಟ್ಟಿದ್ದಾರೆ. ಹೊಸ Bill ಅನ್ನು ಇಲ್ಲಿ ತಯಾರು ಮಾಡಿಲ್ಲ. ಇದರ ಜೊತೆಗೆ ಒಂದನ್ನು ತಾವು ನೋಡಬಹುದು. Penalty Clause ವಿಷಯದಲ್ಲಿ ತಾವು ಕಳೆದ ಬಾರಿ ಇದನ್ನು ಮಾಡಿದ್ದೀರಿ. 'The undersigned is directed to refer to the Office Memorandum No. so & so, on the subject mentioned above, and offer comments as follows;

The penalty proposed for commiting offences shown in item No. a to g of Clause 23 of the Bill relating to the offences and penalties of imprisonment for a term of six months and a fine of not less than Rs.10,000/-. These offences broadly come under the category of cheating for which a penalty described in the Indian Penal Code of 1860

is imprisonment of either description for a term which may extend to one year or with a fine or with both. Thus the penalty proposed in the present Bill is a bit lenient when compared to the provisions of the IPC. It is therefore, proposed that the penalty for committing the above mentioned offences be enhanced, bringing at par with the provisions of the Indian Penal Code.' This is the observation made by the Ministry of Home Affairs. Under that circumstances, IPC ಯೊಳಗೆ ಇದು ಮೋಸದ ಪ್ರಕರಣಕ್ಕೆ ಸಮಾನಾಂತರವಾಗಿರತಕ್ಕಂಥ ಒಂದು ಅಪರಾಧವಾಗಿರುವಂತಹ ಕಾರಣಕ್ಕಾಗಿಯೇ ಆ ರೀತಿಯಲ್ಲಿ ತಾವು ಉದಾರವಾಗಿ ನಡೆದುಕೊಳ್ಳಬಾರದು ಎಂದು ಪತ್ರ ಬಂದಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ತಾಂತ್ರಿಕ ಕಾರಣಗಳಿಂದಾಗಿ ಮಸೂದೆಯನ್ನು ತಿದ್ದುಪಡಿ ಮಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಸನ್ಮಾನ್ಯ ಹಣಕಾಸಿನ ಸಚಿವರು ಅದು ಯಾವ ರೂಪದಲ್ಲಿ ಇದೆಯೋ ಆ ರೂಪದಲ್ಲಿಯೇ ಇಲ್ಲಿ ತಂದಿದ್ದಾರೆ. ಅದಕ್ಕೆ ರಾಷ್ಟ್ರಪತಿಗಳು ಅಂಕಿತ ಹಾಕಿದ ಮೇಲೆ ಅದಕ್ಕೆ ಮತ್ತೆ ನಾವು ತಿದ್ದುಪಡಿಗಳನ್ನು ತರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಮೆಂಡ್‌ಮೆಂಡ್ ತರಲಿಕ್ಕೆ ಬರುವುದಿಲ್ಲ ಎಂದು ತಾವು ಹೇಳುವುದನ್ನು ಒಪ್ಪಿಕೊಳ್ಳೋಣ. ಆದರೆ ತಾವು ಇಲ್ಲಿ ಒಂದು amendment ಅನ್ನು ಕೊಟ್ಟಿದ್ದೀರಲ್ಲಾ. President of India ದಿಂದ assent ಬಂದ ಮೇಲೆ ಅದು Act ಆಗುತ್ತದೆ, ವಿಧೇಯಕ Act ಆಗದೆ ತಿದ್ದುಪಡಿ ತರಲಿಕ್ಕಾಗುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಅದನ್ನು ಒಪ್ಪಿಕೊಂಡರೆ ಇಲ್ಲಿ 23ನೇ ಖಂಡದ ತಿದ್ದುಪಡಿ ಏನಿದೆ, ಸದರಿ ವಿಧೇಯಕದಲ್ಲಿ 23ನೇ ಖಂಡದ 2ನೇ ಉಪ ಖಂಡದಲ್ಲಿ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಎಂಬ ಪದಗಳಿಗೆ ಬದಲಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಎನ್ನತಕ್ಕಂಥ amendment ಅನ್ನು Billಗೆ ತಾವು ತಂದಿದ್ದೀರಲ್ಲಾ, If that is not possible, then this also is not possible.

ಶ್ರೀ ಎಂ.ಪಿ. ಪ್ರಕಾಶ್: ವಿಧಾನ ಪರಿಷತ್ತಿನಲ್ಲಿಯೇ ಆ ಮಸೂದೆಯನ್ನು ಮಂಡಿಸುವಂತಹ ಸಂದರ್ಭದಲ್ಲಿ ಇದು ತಿದ್ದುಪಡಿಯಾಗಿ ಬಂದಿದೆ.

Sri J.C. Madhuswamy: I agree with your argument.

ಶ್ರೀ ಎಂ.ಪಿ. ಪ್ರಕಾಶ್: ಅಲ್ಲಿ ವಿಧಾನ ಪರಿಷತ್ತಿನಲ್ಲಿ ಆಗಿದ್ದರಿಂದ, ಅದನ್ನು ಇಲ್ಲಿ ನಾವು ತರಲೇಬೇಕಾಗಿದೆ.

ಶ್ರೀ ಎನ್. ಧರ್ಮಸಿಂಗ್: ರಾಷ್ಟ್ರಪತಿಗಳಿಂದ ಬಿಲ್ ವಾಪಸ್ಸು ಬಂದಿದೆ. ಅದು ಏಕೆ ಬಂದಿದೆ ಎಂದು ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ನಿಮಿಷ ಸಾರ್, ನಾನು ಅದನ್ನೇ ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ಚರ್ಚೆ ಮಾಡುವಂತಾದ್ದು ಏನೂ ಇಲ್ಲ. ನಾವು ಇದನ್ನು ರಾಷ್ಟ್ರಪತಿಗಳ ಅಂಗೀಕಾರಕ್ಕಾಗಿ ಕಳುಹಿಸಿಕೊಟ್ಟಿದ್ದೆವು. ರಾಷ್ಟ್ರಪತಿಗಳ observation ಏನು? ಅವರು ಆರು ತಿಂಗಳುಗಳಿಗೆ ಬದಲಾಗಿ ಒಂದು ವರ್ಷ ಶಿಕ್ಷೆಯಾಗಬೇಕು ಎಂಬ ತಿದ್ದುಪಡಿ ಮಾಡಬೇಕು ಎಂಬ observationನೊಂದಿಗೆ ವಾಪಸ್ ಕಳುಹಿಸಿದರು. ಇದು ವಿಧಾನ ಪರಿಷತ್ತಿನಲ್ಲಿ ಅನುಮೋದನೆಯಾಯಿತು. ಇಲ್ಲಿ ಆಗಿರಲಿಲ್ಲ. ಅದೇ ರೂಪದಲ್ಲಿ ಇಲ್ಲಿ ತಂದಿದ್ದೇವೆ. ಈ ಕಾಕಂಬಿ ನಿಯಂತ್ರಣ ವಿಧೇಯಕ ಈ ಹಿಂದೆ, ಅಪರಾಧಿಗಳಿಗೆ ಆರು ತಿಂಗಳ ಸಜೆ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಾಗದಂತೆ ದಂಡ ಹಾಕಬಹುದು ಎಂದು ಒಪ್ಪಲಾಗಿತ್ತು. ಆದರೆ Indian Penal Code ಪ್ರಕಾರ ಇಂತಹ ಅಪರಾಧಗಳನ್ನು ವಂಚನೆ ಅಥವಾ cheating ಎಂದು ಪರಿಗಣಿಸಬೇಕಾಗಿರುವುದರಿಂದ, IPC ಯಲ್ಲಿ ಇಂತಹ ಅಪರಾಧಗಳಿಗೆ ಒಂದು ವರ್ಷ ಶಿಕ್ಷೆ ಇರುವುದರಿಂದ Clause 23ರಲ್ಲಿ ಈ ಹಿಂದೆ ತಿಳಿಸಿದ ದಂಡ ಆರು ತಿಂಗಳು ಎಂದಿರುವುದರ ಬದಲು ಒಂದು ವರ್ಷವೆಂದು ಬದಲಾಯಿಸಲು ರಾಷ್ಟ್ರಪತಿಗಳು ಸೂಚಿಸಿರುವುದರಿಂದ ಈ ತಿದ್ದುಪಡಿ ತಂದಿದ್ದೇವೆ. ಅದನ್ನು ಆ ಮನೆಯವರು ಒಪ್ಪಿಕೊಂಡಿದ್ದಾರೆ. ಅದೇ ರೂಪದಲ್ಲಿ ನಾವು ಇದನ್ನು ಇಲ್ಲಿಯೂ ತಂದಿದ್ದೇವೆ. ನಾವೇನು ಇಲ್ಲಿ ಚರ್ಚೆ ಮಾಡುವುದಿದೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಿ ಚರ್ಚೆ ಮಾಡುವುದು ಒಂದೇ ವಿಷಯ. ರಾಷ್ಟ್ರಪತಿಯವರು ಅದೊಂದಕ್ಕೋಸ್ಕರವೇ reject ಮಾಡಿದ್ದರೂ ಕೂಡ the entire Bill is a fresh brought before the House.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಶ್ಚಿತವಾಗಿ, ಏಕೆಂದರೆ entire Bill return ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹೌದು, ಹಾಗಾಗಿ entire Bill ಬಗ್ಗೆ ಇಲ್ಲಿ ಚರ್ಚೆ ಆಗಬೇಕಾಗುತ್ತದೆ. ರಾಷ್ಟ್ರಪತಿಗಳು ಅಷ್ಟಕ್ಕೆ ಹೇಳಿದ್ದರೆ, ನೀವು amendment ಅನ್ನು ಅಷ್ಟಕ್ಕೇ ಇಲ್ಲಿ ತರಲಿಕ್ಕಾಗಲಿಲ್ಲ. ಏಕೆ? It was not an Act.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಹಿಂದೆ ವ್ಯಾಪಕವಾಗಿ ಆ ಮನೆಯಲ್ಲಿ ಮತ್ತು ಈ ಮನೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿ ಪಾಸ್ ಮಾಡಿ ಕಳುಹಿಸಿ

ಕೊಡಲಾಗಿತ್ತು. ರಾಷ್ಟ್ರಪತಿಗಳು ಈ ತಿದ್ದುಪಡಿ ತರಬೇಕು ಎಂದು ಕಳುಹಿಸಿ ಕೊಟ್ಟಮೇಲೆ, ಆ ಮನೆಯಲ್ಲಿ ಇದು ಒಪ್ಪಿಗೆಯಾಗಿದೆ. ಅದೇ ರೂಪದಲ್ಲಿ ನಾವು ಇಲ್ಲಿಯೂ ಕೂಡ ತಂದಿದ್ದೇವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರ್, ಇಲ್ಲಿ ರಾಷ್ಟ್ರಪತಿಗಳು ಆರು ತಿಂಗಳು ಇರುವುದನ್ನು ಒಂದು ವರ್ಷವೆಂದು ಮಾಡಿಕೊಳ್ಳಲಿಕ್ಕೆ ಆಗುತ್ತದೆಯೇ ನೋಡಿ ಎಂದು ತಮಗೊಂದು advice ಮಾಡಿದ್ದಾರೆ. ತಾವು IPC ಯನ್ನೂ ಕೂಡ ಓದಬೇಕು. ರಾಷ್ಟ್ರಪತಿಗಳು reject ಮಾಡಿರುವಂತಹ bill ಅನ್ನು ನೀವು ಇಲ್ಲಿ re-introduce ಮಾಡುತ್ತಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್: ಇಲ್ಲಿ reject ಎನ್ನುವುದಕ್ಕಿಂತ, ಅವರು Punishment Clause ವಿಷಯಕ್ಕೆ ಮಾತ್ರ ತಿಳಿಸಿದ್ದಾರೆ.

Sri J.C. Madhuswamy: Yes, with that reservation, he has rejected the approval of your Bill.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವೇನು advocate ಮಾಡಿದಿರಿ, ಅದರ ವಿರುದ್ಧ ಇದು ಇದೆ.

ಶ್ರೀ ಎಂ.ಪಿ. ಪ್ರಕಾಶ್: ಆ ತರಹ ಇಲ್ಲ.

Sri K.R. Ramesh Kumar: Unless it is enacted, an amendment cannot be brought. It is still in the snape of the Bill.

Sri M.P. Prakash: No, No. Please kindly look into the Bill.

Sri K.R. Ramesh Kumar: It is still in the shape of a Bill. How can we introduce that?

Sri M.P. Prakash: No, No. ಹಾಗಲ್ಲ...

Sri J.C. Madhuswamy: It has to be reconsidered by the House Sir. There is no question of any amendment. ಅದೇ ನಮ್ಮದೂ ವಾದವಾಗಿದೆ.

Sri M.P. Prakash: This Bill was originated in the Council. In the Council when the Bill was presented, it was amended. ಅಲ್ಲಿ ಅದನ್ನು ಮಾಡುವಾಗ. As passed by both the Houses and as returned by the President of India for re-consideration, and as passed by the Legislative Council with an amendment for the second time. So, it was originated

there in the Council and in the Council, at the stage of the Bill, it was amended.

(ಅಡಚಣೆ)

Sri J.C. Madhuswamy: Just because Council pass ಮಾಡಿದೆ ಎಂದು ನಾವು pass ಮಾಡಲಿಕ್ಕಾಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್: ಆ ತಿದ್ದುಪಡಿಯನ್ನು ಅಲ್ಲಿ ಕೌನ್ಸಿಲ್‌ನಲ್ಲಿ ತಂದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಾರ್, ಈಗ ನಿಮ್ಮ ಮಾತನ್ನು ಒಪ್ಪಿಕೊಳ್ಳೋಣ. ಇದು in the form of Bill ಇದೆಯೋ ಅಥವಾ Act ಆಗಿ ಇದೆಯೋ Act ಆದರೆ amendment ಮಾಡಬಹುದು.

Sri M.P. Prakash: This is a Bill Sir.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಬಿಲ್ ಆದಮೇಲೆ ನೀವು ಇದಕ್ಕೆ amendment ಹೇಗೆ ತರುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್: ಅಲ್ಲಲ್ಲ, ಇಲ್ಲಿ amendment ತರತಕ್ಕದ್ದು ಎಂದರೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: . . . . ಎರಡನೆಯದಾಗಿ, ಅವರು ಸಲಹೆ ಕೊಟ್ಟಿದ್ದ ಮೇರೆಗೆ ಈ amendment ತರಲಾಗಿದೆಯೇ?

ಶ್ರೀ ಎಂ.ಪಿ. ಪ್ರಕಾಶ್: ಅವರು ಸಲಹೆ ಕೊಟ್ಟಿರತಕ್ಕಂಥದ್ದು ಈ ವಿಷಯಕ್ಕೆ ಅಲ್ಲ. ಅವರು ಸಲಹೆ ಕೊಟ್ಟಿರತಕ್ಕಂಥಾದ್ದು IPC ಒಳಗೆ cheating ಎಂದು 420ರ ಕೆಳಗಡೆ ಏನು ಬರುತ್ತದೆ, ಆ punishment ಗೆ ಅನುಗುಣವಾದಂಥ ರೀತಿಯಲ್ಲಿ ಇರಬೇಕು. ಈಗ ನೀವು ಬಹಳ ಉದಾರವಾದಂಥ ತಿದ್ದುಪಡಿಯನ್ನು ಮಾಡಿದ್ದೀರಿ ಎಂದು ಹೇಳಿರತಕ್ಕಂಥ ಕಾರಣಕ್ಕಾಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಗೌರವಾನ್ವಿತ ರಾಷ್ಟ್ರಪತಿಗಳು ಹೇಳಿರುವುದು ಬಿಲ್‌ನ ಕಡೇ ಪುಟದಲ್ಲಿದೆ ನೋಡಿ. ಅವರು ಏನು ಹೇಳಿದ್ದಾರೆಂದರೆ, Date: 10th June 2005. 'I.A.P.J. Abdul Kalam, President of India, having considered the Karnataka Molasses Regulation Bill, 2004 which was reserved for my consideration under the provisions of article 200 of the Constitution of India, do hereby direct, in pursuance of article 201 of the Constitution, that the Bill be returned to the Legislature of the State of Karnataka to re-consider it and in section 23, sub-section (2) of the said Bill for the words "which may extend to six months", the words which

may extend to one year", be substituted.' ಎಂದು ಬಂದಿರುವಂಥದ್ದು. ಅದರ ನಂತರ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ amendment ಆಗಿ ಇಲ್ಲಿ ಚರ್ಚೆ ಮಾಡಬೇಕೆಂದು ತಂದಿರುವುದು. ಚರ್ಚೆ ಮಾಡಬೇಕೆಂದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಷ್ಟ್ರಪತಿಗಳಿಗೆ ಈ ಬಿಲ್ ಅನ್ನು ಕಳುಹಿಸಿದಾಗ ಅವರು ಈ ಬಿಲ್ ಅನ್ನು ವಾಪಸ್ ಕಳುಹಿಸಿದ್ದಾರೆ. ಅದು ಒಂದು ಪಾಯಿಂಟ್‌ಗೋ ಅಥವ ಎರಡು ಪಾಯಿಂಟ್ ಗೋ ಎನ್ನುವ ಪ್ರಶ್ನೆ ಬರುವುದಿಲ್ಲ. ಅವರು single point ಗೂ objection ಮಾಡಿದರೂ ಕೂಡ ಇಡೀ ಬಿಲ್ ವಾಪಸ್ ಬಂದಿದೆ ಎಂದೇ ಅರ್ಥ. ಹಾಗಾಗಿ ಈ ಬಿಲ್ ಬಗ್ಗೆ ಮತ್ತೆ ಚರ್ಚೆಮಾಡಿಯೇ ಅಂಗೀಕಾರ ಮಾಡಬೇಕು. It is not an amendment. ಇದು ಒಂದು. ಎರಡನೆಯದಾಗಿ, ಕೌನ್ಸಿಲ್‌ನಲ್ಲಿ ಅಂಗೀಕಾರವಾಗಿದೆ ಎನ್ನುವ ಕಾರಣಕ್ಕಾಗಿ ಎನ್ನುವ ವಾದವನ್ನು ಹಾಗೆಯೇ ಒಪ್ಪಿಕೊಳ್ಳಬೇಕೆಂದೇನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಷ್ಟ್ರಪತಿಗಳು ಹೇಳಿರುವುದು ಒಂದು ಭಾಗ ಚರ್ಚೆಯಾಗಲಿ. ಇನ್ನೊಂದು ಭಾಗ ಏನೆಂದರೆ, confiscation by Excise officer in certain cases ಎಂದು ಒಂದು Clause ಅನ್ನು ಇಟ್ಟಿದ್ದೀರಿ. Confiscation ಮಾಡಬೇಕೆಂದು ಹೇಳುತ್ತೀರಿ, ಆಫೀಸರ್‌ಗೆ ಕಾಂಪೌಂಡ್ ಮಾಡುವ ಅಧಿಕಾರವನ್ನು ಕೊಡುತ್ತೀರಿ, ಆಫೀಸರ್‌ಗೆ ಹರಾಜು ಮಾಡುವ ಅಧಿಕಾರವನ್ನು ಕೊಡುತ್ತೀರಿ, ಹರಾಜು ಮಾಡಿದ ದುಡ್ಡು shortage ಆದರೆ ನಾಳೆ ಅವನು ಯಾವುದಾದರೂ ಸಿವಿಲ್ ಕೋರ್ಟ್‌ಗೆ ಹೋಗಬಹುದು, ಸೆಷನ್ ಕೋರ್ಟ್‌ಗೆ ಅಪೀಲು ಹೋಗಬಹುದು. ಸೆಷನ್ ಕೋರ್ಟ್‌ನಲ್ಲಿ ಅವನಿಗೆ ವ್ಯಾಲ್ಯೂ ಜಾಸ್ತಿಯಾದರೆ ಆ ಹಣವನ್ನು ಕೊಡುವವರು ಯಾರು? ಈ ಬಗ್ಗೆ ಕೂಡ ತಾವು ನೋಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇವೆಲ್ಲದರ ಬಗ್ಗೆ ಈ ಸದನದಲ್ಲಿ ಈ ಹಿಂದೆಯೇ ಚರ್ಚೆಯಾಗಿ ಬಿಲ್ ಪಾಸ್ ಆದ ನಂತರವೇ ರಾಷ್ಟ್ರಪತಿಗಳಿಗೆ ಕಳುಹಿಸಲಾಗಿತ್ತು. ರಾಷ್ಟ್ರಪತಿಗಳು ಏನು observation ಮಾಡಿದ್ದಾರೆ, ಅದಕ್ಕೆ ಅಮೆಂಡ್‌ಮೆಂಟ್ ಮಾಡಿದ್ದೇವೆ. ಈ ವಿಧೇಯಕದ ಕೆಲವು ಅಂಶಗಳನ್ನು ನಾನು ಓದುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಅದನ್ನು ನೋಡಿದ್ದೇನೆ. ರಾಷ್ಟ್ರಪತಿಗಳು ಏನು ಅಬ್ಸರ್ವೇಶನ್ ಮಾಡಿದ್ದಾರೆ ಆ ಪ್ರಕಾರ ನೀವು ಅಮೆಂಡ್‌ಮೆಂಟ್ ಮಾಡಿರುವುದು ಸರಿ. ನಾನು ಆ ಬಗ್ಗೆ ಹೇಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪಮುಖ್ಯಮಂತ್ರಿಗಳು): ಮಾನ್ಯ ಮಾಧುಸ್ವಾಮಿಯವರೆ, ಅದರ ಜೊತೆಗೆ ಇನ್ನು ಯಾವ ಅಂಶಗಳಿವೆ ಎನ್ನುವುದನ್ನು ಹೇಳುತ್ತೇನೆ. ಈ ವಿಧೇಯಕವು ಈ ಕೆಳಕಂಡ ಅಂಶಗಳನ್ನೊಳಗೊಂಡಿದೆ; ಕಾಕಂಬಿಯ ಉತ್ಪಾದನೆ, ಸ್ವಾಧೀನ, ರಫ್ತು, ಆಮದು, ಸಾಗಾಣಿಕೆ ಮತ್ತು ಮಾರಾಟವನ್ನು ನಿಯಂತ್ರಿಸುವುದು. ಕಾಕಂಬಿಯನ್ನು ಶ್ರೇಣೀಕರಣ ಗ್ರೇಡಿಂಗ್ ಮಾಡುವುದು. ಕಲಬೆರಕೆಯನ್ನು ಮಾಡುವುದನ್ನು ತಡೆಗಟ್ಟುವುದು. ಕಾಕಂಬಿಯ ಮಾರಾಟ ಅಥವಾ ವಿಲೇ ಮಾಡುವುದರ ಮೇಲೆ ನಿರ್ಬಂಧ ಹೇರುವುದು. ಕಲಬೆರಕೆಯಾದ ಅಥವಾ ಕೆಟ್ಟುಹೋದ ಕಾಕಂಬಿಯನ್ನು ನಾಶಪಡಿಸುವುದು. ಕಾಕಂಬಿಯ ಸ್ವಾಧೀನತೆಗಾಗಿ ಲೈಸೆನ್ಸ್ ನೀಡುವುದು. ಅಧಿನಿಯಮದ ಉಪನಿಬಂಧನೆಗಳ ಉಲ್ಲಂಘನೆಗಾಗಿ ದಂಡನೆ ವಿಧಿಸುವಂಥದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಅದಕ್ಕೇ ಅವರಿಗೆ ಹೇಳಿದ್ದು. ನೀವು confiscate ಮಾಡಿ ಬಿಡುತ್ತೀರಿ. ನಿಮ್ಮ ವಶಕ್ಕೆ ತೆಗೆದುಕೊಂಡು ಬಿಡುತ್ತೀರಿ, ಆ ಬಗ್ಗೆ ತಾವು ಕೋರ್ಟ್‌ಗೆ ಮಾಹಿತಿಯನ್ನು ಕೊಡುತ್ತೀರಿ. ಬಿಲ್‌ನಲ್ಲಿ ತಾವು ಪ್ರಾವಿಶನ್ ಮಾಡಿರುವುದನ್ನು ನಾನು ಹೇಳುತ್ತಿದ್ದೇನೆ. ಒಂದು ಸಲ ಕೋರ್ಟ್‌ಗೆ information ಹೋಗಿಬಿಡುತ್ತದೆ, ನೀವಿಷ್ಟನ್ನು, ಕಾಕಂಬಿಯನ್ನೂ confiscate ಮಾಡುವ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೀರಿ, vehicle ಅನ್ನೂ ಮಾಡುವ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೀರಿ, confiscate ಆಗಿದ್ದನ್ನು ಅಧಿಕಾರಿ compound ಮಾಡಬಹುದು ಎನ್ನುತ್ತೀರಿ. ಕೋರ್ಟ್‌ಗೆ ಮಾಹಿತಿಯನ್ನು ಕೊಟ್ಟಿರುತ್ತೀರಿ, ಇಲ್ಲಿ compound ಮಾಡು ಎನ್ನುತ್ತೀರಿ. ಎರಡನೆಯದಾಗಿ ಅದನ್ನು auction ಮಾಡಬಹುದು ಎನ್ನುತ್ತೀರಿ, ಮಾಡಬೇಕಾಗುತ್ತದೆ. ನಾನು ಅದನ್ನೇ ಹೇಳುತ್ತಿರುವುದು. ಕಾಕಂಬಿಯನ್ನು ನೀವು ಬಹಳ ದಿವಸ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. But, court ನಲ್ಲಿ ಅವನು appeal ಹಾಕಿದ್ದು case decide ಆದಾಗ value differs ನಿಮ್ಮ ಹರಾಜಿನಲ್ಲಿ ಬರುವುದಿಲ್ಲ ಅಷ್ಟು ದುಡ್ಡು. ಅಲ್ಲಿ ಇನ್ನೊಂದು ಯಾವುದೋ ರೇಟ್ ಅವನಿಗೆ ಫಿಕ್ಸ್ ಆಗಿಬಿಡುತ್ತದೆ. ಆ ಪರಿಹಾರವನ್ನು ನೀವು ಕೊಡುತ್ತೀರಾ ಎಂದು ನಾನು ಕೇಳುತ್ತಿರುವುದು. ಆ ಬಗ್ಗೆ ನೀವು ಹೇಳಬೇಕಾಗುತ್ತದಲ್ಲವೇ ಸಾರ್? ಏಕೆಂದರೆ ನಾಳೆ he has every scope to appeal

before the Session court ಎಂದು ಹೇಳಿದ್ದೀರಲ್ಲಾ ತಾವು, ಆ ಬಗ್ಗೆ ತಾವು ಸ್ವಲ್ಪ ಪರಿಹರಿಸಿಕೊಂಡುಬಿಡಿ. ನಮಗೇನೂ ನಿಮ್ಮ ಎಲ್ಲಾ ಬಿಲ್‌ಗಳನ್ನು ತಕರಾರು ಮಾಡಬೇಕು, ವಿರೋಧ ಮಾಡಬೇಕು ಎನ್ನುವ ಚಟಕ್ಕೆ ಮಾಡುತ್ತಿಲ್ಲ. ಅಕಸ್ಮಾತ್ ಓದಬೇಕಾದರೆ ಇಲ್ಲಿ ಸ್ವಲ್ಪ ಏನೋ ವ್ಯತ್ಯಾಸವಾಗುತ್ತದೆ ಎಂದು ನಮಗೆ ಅನ್ನಿಸಿದ್ದರಿಂದ ಅದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಮೊದಲನೆಯದಾಗಿ ಸನ್ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ FIR ಹಾಕಿದ ತಕ್ಷಣ without court permission ನೀವು compound ಮಾಡಬಾರದು. ಈ compounding procedures ಎಲ್ಲವನ್ನೂ ಮುಗಿಸಿ ಆಮೇಲೆ ನೀವು FIR ಹಾಕುವುದಕ್ಕಾದರೂ ನೀವು provision ಮಾಡಿಕೊಳ್ಳಬೇಕು. But where as, ನೀವು ಇಲ್ಲಿ ಏನು ಹೇಳುತ್ತೀರಿ seize ಆದ ತಕ್ಷಣ FIR ಹಾಕು ಎನ್ನುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಆ ಬಗ್ಗೆಯೇ ಹೇಳುವುದಕ್ಕೆ ಹೊರಟಿರುವುದು. ಈ ಎಲ್ಲಾ ಸಾಧಕ ಬಾಧಕಗಳನ್ನು ಈ ಮನೆಯಲ್ಲಿ ಮತ್ತು ಆ ಮನೆಯಲ್ಲಿ ನಾವುಗಳು ಚರ್ಚೆ ಮಾಡಿ ಕಳುಹಿಸಿಕೊಟ್ಟಿದ್ದೆವು. ಈ ಬಿಲ್ ಮೇಲೆ ವ್ಯಾಪಕವಾಗಿ ಚರ್ಚೆಯಾಗಿ ನಿಮ್ಮ ಎಲ್ಲಾ ಸಲಹೆಗಳನ್ನು ಪಡೆದುಕೊಂಡೇ ಕಳುಹಿಸಿಕೊಟ್ಟಿದ್ದೆವು. ಈ ಅಮೆಂಡ್‌ಮೆಂಟ್‌ನ್ನು ಮಾಡಬೇಕೆಂದು ರಾಷ್ಟ್ರಪತಿಗಳು ಕಳುಹಿಸಿಕೊಟ್ಟಿದ್ದಾರೆ. ಅದನ್ನು ನಾವು ಆ ಮನೆಯಲ್ಲಿ ನಾವು approve ಮಾಡಿ O.K. ಆದಮೇಲೆ ನಾವು ಈ ಮನೆಗೆ ತಂದಿದ್ದೇವೆ. ನೀವುಗಳೆಲ್ಲಾ ಹೇಳಿರುವುದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅಲ್ಲಾ ಮಾನ್ಯ ಯಡಿಯೂರಪ್ಪನವರೆ, ಅವರು ಒಂದೇ ಮಾತಿನಲ್ಲಿ ಕೇಳುತ್ತಾರೆ. ಈ ವಸ್ತುವನ್ನು ನಿಮ್ಮ ಅಧಿಕಾರಿಗಳು ಎಲ್ಲೋ ಕೆಲವರು ತಪ್ಪು ಎಸಗಿದ್ದಾರೆಂದು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾರೆ, ಇದನ್ನು ಬಹಳ ದಿವಸಗಳ ಕಾಲ ಇಟ್ಟುಕೊಳ್ಳುವುದಕ್ಕಾಗುವುದಿಲ್ಲವಾದ್ದರಿಂದ ಅದನ್ನು ಹರಾಜು ಹಾಕುತ್ತಾರೆ. ಸ್ವಾಧೀನಪಡಿಸಿಕೊಂಡ ಮಾಲನ್ನು ಹರಾಜು ಹಾಕುತ್ತಾರೆ. ಹರಾಜಿನಲ್ಲಿ ಇಂತಿಷ್ಟು ಹಣವೆಂದು bid final ಆಗುತ್ತದೆ. ಒಂದು ವೇಳೆ ಅಲ್ಲಿ ಹಾರಾಜಿನಲ್ಲಿ ಯಾವುದಾದರೂ ಒಂದು ರೀತಿಯ ಅರೇಂಜ್‌ಮೆಂಟ್ ಆಗಿ ಹರಾಜು ನಕಲಿ ಹರಾಜಾಗಿದ್ದು ಬೇರೆ ಹಣಕ್ಕೆ ತೆಗೆದುಕೊಳ್ಳುವ ಸಾಧ್ಯತೆ ಕೂಡ ಇರುತ್ತದೆ. ಯಾವನು ಅದರ ನಿಜವಾದ ಮಾಲೀಕನಿರುತ್ತಾನೋ ಅವನಿಗೆ ಕೋರ್ಟ್‌ನಲ್ಲಿ ಅಪೀಲ್‌ಗೆ ಹೋಗುವುದಕ್ಕೆ ಅವಕಾಶವಿದೆ. ಹೆಚ್ಚಿಗೆ ಹಣ ರಿಯಲೈಸ್ ಆಗುತ್ತಿತ್ತು, ಕಡಿಮೆ ಬಿಡ್‌ಗೆ ಇವರುಗಳೆಲ್ಲರೂ ಕೂಡ clandestine ಆಗಿ ಮಾಡಿದ್ದಾರೆ ಎಂದು

7.30 PM

ಹೇಳುತ್ತಾನೆ. ಹೈಯರ್ ಕೋರ್ಟ್‌ನಲ್ಲಿ ಅಪೀಲ್‌ನ್ನು ಅಲೋ ಮಾಡುತ್ತಾರೆ. ಆಗ who is to pay that money?

ಶ್ರೀ ಕೆ.ಜಿ. ಬೋಪಯ್ಯ(ಮಡಿಕೇರಿ): ಮಾನ್ಯ ಉಪಾಧ್ಯಕ್ಷರೆ, ಈಗ ತಾನೇ ಮಾನ್ಯ ಮಾಧುಸ್ವಾಮಿಯವರು ಹಾಗೂ ಮಾನ್ಯ ರಮೇಶ್‌ಕುಮಾರ್‌ರವರು ambiguity ಎಂದು ಏನು ಹೇಳಿದರು; ಅದರ ಬಗ್ಗೆ ಮಾತನಾಡುತ್ತೇನೆ. Act ನಲ್ಲಿ very clear, ಆಗಿದೆ. ಅಲ್ಲಿ ಏನೂ ambiguity ಕಾಣುವಂಥದ್ದು ಇಲ್ಲ. ಯಾವುದೇ ಒಬ್ಬ ಅಧಿಕಾರಿಗೆ ಏನು confiscationಗೆ ಅಧಿಕಾರವನ್ನು ಕೊಟ್ಟಿದ್ದಾರೆ, confiscation order ಮಾಡುವ ಮೊದಲು show cause notice ಕೊಡಬೇಕು. ಆ show cause noticeಗೆ ಉತ್ತರ ಕೊಟ್ಟು, if satisfied, ಅದೇನಿದೆ ಆಮೇಲೆ ಆ ಬಗ್ಗೆ enquiry ಮತ್ತೊಂದು ಮಾಡಿ ಆ ಬಗ್ಗೆ ಮಾಡುವಂಥಾದ್ದು very clear. ಇಲ್ಲಿ ambiguity ಎನ್ನುವಂಥಾದ್ದು ತಾವು ಹೇಳಿದ ರೀತಿಯಲ್ಲಿ ಇಲ್ಲ. ಇಲ್ಲಿ ambiguity ಎನ್ನುವಂತಾದ್ದು ತಾವು ಹೇಳಿದ ರೀತಿಯಲ್ಲಿ ಸಿವಿಲ್ ಕೋರ್ಟ್‌ಗೆ FIR ಎಲ್ಲಿ ಕಳುಹಿಸುವುದು? FIR to the Magistrate. Magistrate means it is Criminal Court. ಏಕೆ? The punishment is there for one year. ಅಂತ ಈಗೇನು ಅಮೆಂಡೆಮೆಂಟ್ ತರುತ್ತಿದ್ದೀರಿ ಅದಕ್ಕೆ FIR; ಆ FIR ಅನ್ನು ಇದಕ್ಕೆ ಏಕೆ ಕನೆಕ್ಟ್ ಮಾಡುತ್ತೀರಿ? This is a quasi-judicial proceedings ಇವತ್ತು Karnataka Excise Act, ಇದೆ, Karnataka Forest Act. ಇದೆ. The same provision ನಲ್ಲೂ ಇದೆ. ಅದರಲ್ಲಿ ಎಲ್ಲಿದೆ ambiguity? ನನಗಂತೂ ಕಾಣುತ್ತಿಲ್ಲ ಅಪೀಲ್‌ನಲ್ಲಿ ಕೂಡ whether the Officer who acts as a quasi-judicial ಅವನಿಗೆ ಏನು ಪವರ್ ಕೊಟ್ಟಿದೆ? The Revisional Court i.e., District Court or Session Court. ಅವನು ಮಾಡಿದ್ದು ಸರಿಯೋ ತಪ್ಪೋ ಅಂತ ಅಷ್ಟೇ ಹೇಳುವಂತಾದ್ದು ಅಲ್ಲಿ ಇದೆ. valuation ಇನ್ನೊಂದು ಏನೂ ಬರುವುದಿಲ್ಲ. whether this order is in accordance with the provisions of this Act. ಅಷ್ಟನೇ ನೋಡಿ ಅವರು ಆರ್ಡರ್ ಮಾಡಬೇಕೇ ಹೊರತು ಇಲ್ಲಿ ವ್ಯಾಲ್ಯೂ ಸರಿ ವ್ಯಾಲ್ಯೂ ತಪ್ಪು ಇನ್ನೊಂದು ಎಂದು ಹೇಳುವಂಥಾದ್ದು ಇಲ್ಲಿ It is very clear. Ambiguity is not there. The Act is very clear.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ತಾವು ಸೆಕ್ಷನ್ 28 ಓದಿ. – Report about seizure:- A report about any molasses or articles seized under

Section 27 shall as soon as may be after such seizure, be submitted to the Magistrate having jurisdiction. 'Magistrate having jurisdiction.

29-Power to compound offences:- 'The Molasses Controller or any other Officer authorized in this regard by the State Government, may accept from any person who is reasonably suspected of having committed an offence punishable under this Act, a sum of money not less than five thousand rupees but which may extend to twenty five thousand rupees by way of compounding fine for the offence which may have been committed and in all the cases in which any property has been seized as liable to forfeiture under this Act, may release the same on payment of value thereof as estimated by him on payment of such sum of money or value or both, as the case may be", ಅಂತ ಅಲ್ಲಿ ಹೇಳಿಕೊಂಡು ಬರುತ್ತಾರೆ ಆಮೇಲೆ ಏನು ಮಾಡುತ್ತಾರೆ. Provided that no molasses shall be released. No ಈಗ ತಾವು ಅಡ್ವೋಕೇಟ್ ಆಗಿ ಕೆಲಸ ಮಾಡಿದ್ದೀರಿ, ಕೋರ್ಟಿಗೆ ಒಂದು ರಿಪೋರ್ಟ್ ಬೇಕೆಂದರೆ'...

Sri K.G. Bopaiah: When the offence is compounded, no appeal lies.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗಂತ ಎಲ್ಲಿ ಹೇಳಿದ್ದೀರಿ? ಹಾಗೆ ಹೇಳಿಲ್ಲ ಎಂದು ನಾನು ಹೇಳುತ್ತಿರುವುದು. That is not said in this Bill...

Sri K.G. Bopaiah: You read out the appeal provisions.

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ಕಾರದ ಗಮನಕ್ಕೆ ತರುವುದು ನಮ್ಮ ಕೆಲಸ, ಸರ್ಕಾರ ನಡೆಸುವುದು ನಿಮ್ಮ ಕೆಲಸ; ಮಾಡಿ ನಾಳೆ litigation ಬಗ್ಗೆ ಮಾತನಾಡೋಣ.

Sri M.P. Prakash: If an offence is compounded, that means it is the end of the proceedings ಅದನ್ನು ಮತ್ತೆ ನಾವು...

Sri K.G. Bopaiah: When once the offence is compounded, no appeal lies.

Sri J.C. Madhu Swamy: Bear with us. Offence is compound ಎಂದರೆ ಮುಗೀತು.

ಶ್ರೀ ಕೆ.ಜಿ. ಜೋಪಯ್ಯ: ಒಂದು ಸಲ compound ಮಾಡಿದ ಮೇಲೆ ಮತ್ತೇ ಅಪೀಲ್‌ಗೆ ಹೋಗುತ್ತೇನೆ ಎಂದರೆ ಹೇಗೆ ಸಾಧ್ಯ?

ಶ್ರೀ ಜೆ.ಸಿ. ಮಾಧುಸ್ವಾಮಿ: ಆಕ್ಷನ್ ಪ್ರಾವಿಜನ್ ಕೂಡ ಮಾಡಿದ್ದೀರಿ. ಒಂದು ಕಡೆ ಕೋರ್ಟಿಗೆ ಹೇಳುತ್ತೀರಿ.

Sri M.P. Prakash: With regard to other objections, power to make rules ನಲ್ಲಿ ಮಾನ್ಯ ರಮೇಶ್‌ಕುಮಾರ್ ಹಾಗೂ ತಾವು ಬಹಳ ಮುಖ್ಯವಾದ ವಿಷಯವನ್ನು ಎತ್ತಿದಿರಿ. ಯಾವುದೋ ಕಾರಣದಿಂದ ನೀವು confiscate ಮಾಡಿರುತ್ತೀರಿ, ಆಕ್ಷನ್ ಆಗುತ್ತದೆ, ಅದರಲ್ಲಿ ನೀವು ಮುಂದೆ ಅಪೀಲ್‌ನಲ್ಲಿ ಅಥವಾ ಮತ್ತೊಂದು ಕಡೆ ನಿಮ್ಮ ಕೇಸ್ ಫೇಲಾದರೆ ಅದನ್ನು ಏನು ಮಾಡಬೇಕು? ಅವನಿಗೆ ಹೆಚ್ಚಿನ ಬೆಲೆ ಫಿಕ್ಸ್ ಆದರೆ ಏನು ಮಾಡುತ್ತೀರಿ ಎನ್ನುವಂಥಾದ್ದನ್ನು ಹೇಳುತ್ತೀರಿ. ಅದಕ್ಕೆ ಏನು ಮಾಡಿದ್ದಾರೆ. Power to make rules - Section 41ರ ಕೆಳಗೆ (d) ನಲ್ಲಿ The procedure for compounding of offences' ಒಂದಿದೆ. '(g) Disposal of molasses and articles confiscated under this Act; and (h) Any other matter which is to be or may be prescribed' ಈ ರೀತಿ 41ನಲ್ಲಿ ಹೇಳಿ. 36ನಲ್ಲಿ – Rules framing authority ಅಲ್ಲಿ ಕೊಟ್ಟುಕೊಂಡು ಅಲ್ಲಿ ಏನು ಹೇಳುತ್ತಾರೆ. 'Award of confiscation not to interfere with other punishments:- The award of any confiscation under sub-section(2) of section 31 or section 33 or section 34 or section 35 shall not prevent infliction of any other punishment to which the person affected thereby is liable under this Act' ಮುಂದೆ ನಾವು Essential Commodities Act ನೊಳಗೆ.

Sri K.R. Ramesh Kumar: Whether there is a provision to auction the confiscated material under the proposed Bill?

Sri M.P. Prakash: No. He has to suffer. Suppose whatever the auction amount is there, he has to receive. That's all.

Sri K.R. Ramesh Kumar: Sir, kindly bear with me. My question is, if there is a provision for auctioning the confiscated material, the question that we have raised arises. If there is no provision for auctioning of the confiscated material, then the question doesn't arise ನಾವೇನು ಕೇಳುತ್ತಿದ್ದೇವೆ ಎಂದರೆ confiscated material ನ auction ಮಾಡಿದಾಗ

ಅದರ original owner ಏನಿರುತ್ತಾನೆ, ಅವನು aggrieved ಆಗಿ, ಅವನು Appellate Authority ಗೆ appeal prefer ಮಾಡಿ, the amount realized out of auction is insufficient ಅದರ actual worth ಇಷ್ಟಿತ್ತು ಎಂದು ಹೇಳಿ by chance, hypothetically speaking, the appeal were to be allowed by the Appellate Authority, then who is to bear for this loss?

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಸೆಕ್ಷನ್ 28, 29 ಮತ್ತು 36 ಇವು ಮೂರೂ ಕೂಡ inter-contradictory result ಅನ್ನು ಕೊಡುತ್ತದೆ. 28ರಲ್ಲಿ ನೀವೇನು ಹೇಳುತ್ತೀರಿ ಮ್ಯಾಜಿಸ್ಟ್ರೇಟ್‌ಗೆ FIR ಕಳುಹಿಸಬೇಕೆಂದು ಹೇಳುತ್ತಾರೆ. ಮ್ಯಾಜಿಸ್ಟ್ರೇಟ್‌ಗೆ FIR ಕಳುಹಿಸಿದ ಮೇಲೆ it is left to the Magistrate to decide. It is not the business of the Officer to decide the compound No. 1 No.2 ಮತ್ತೆ ನೀವೇನು ಹೇಳುತ್ತೀರಿ 36ರಲ್ಲಿ ರೂಲ್ಸ್ ಮಾಡಿಕೊಳ್ಳಬಹುದು ಎಂದು ಹೇಳುತ್ತೀರಿ. ಆಕಸ್ಮಾತ್ ನಾನು ಅಪೀಲ್ ಹೋದಾಗ ಆ ಕೋರ್ಟ್ ಈ ಆಫೀಸರ್ ಹಾಕಿರತಕ್ಕಂಥ compound ಕಡಿಮೆ ಇದೆ, ಜಾಸ್ತಿ ಹಾಕಿ ಎಂದೋ ಅಥವಾ ನೀವು ಹಾಕಿರತಕ್ಕಂಥ compound ಜಾಸ್ತಿಯಾಗಿದೆ ಕಡಿಮೆ ಮಾಡಿ ಎಂತಲೋ ಆ ಕೋರ್ಟ್ ತೀರ್ಮ ಕೊಟ್ಟಾಗ ನಿಮ್ಮ ಬಿಲ್‌ನ ಪರಿಸ್ಥಿತಿ ಏನು? ನಿಮ್ಮ ಆಫೀಸರ್ ಕರ್ತವ್ಯ ಏನು? ಒಂದು ನಿಮಿಷ ನಾನು ಪೂರ್ತಿ ಹೇಳಿಬಿಡುತ್ತೇನೆ. ನೀವು ಸರಿಯಾಗಿ ಆಲೋಚನೆ ಮಾಡಿ 28,29, 36 ಈ ಮೂರೂ ಕೂಡ inter-contradictory ಇದೆ. Once you have sent an FIR to the Magistrate, the entire power lies with the Magistrate to decide it. It is not the Officer who has to decide the compound ಇಷ್ಟೆ problem ಇರತಕ್ಕಂಥಾದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದುವರೆಗೆ ರಾಜ್ಯದ ಇತಿಹಾಸದಲ್ಲಿ ಈ ರೀತಿ ಅಪೀಲ್ ಹೋಗ ಪ್ರಸಂಗಗಳಿಲ್ಲ, ಉದಾಹರಣೆಗೆ ನಾವೇನು ಒಂದು ಲಾರಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ದ್ದು ಸೀಜ್ ಮಾಡುತ್ತೇವೆ, ಅವತ್ತು ಒಂದು ಆಕ್ಷನ್ ಮಾಡುತ್ತೇವೆ, ಅದು ಅಮೌಂಟ್ ರೆಡಿ ಇದೆ. ಅದರ ಮೇಲೆ ಕೊಟ್ಟಂತಹ ಉದಾಹರಣೆ ಈ ರಾಜ್ಯದ ಇತಿಹಾಸದಲ್ಲಿ ಒಂದೂ ಇಲ್ಲ. ಆ ಪಾರ್ಟಿ ಯಾರಿದ್ದಾರೆ, ಅವತ್ತೇನು ಹರಾಜಾಗಿದೆ, ಅದಕ್ಕೆ ಅವನು ಸಫರ್ ಮಾಡಲೇಬೇಕು, ಅದಕ್ಕೆ ನಾವ್ಯಾರೂ ಜವಾಬ್ದಾರರಲ್ಲ. ಇದುವರೆಗೂ ಇತಿಹಾಸದಲ್ಲಿ ಒಂದು ಉದಾಹರಣೆ ಬಂದಿಲ್ಲ. ಅವನು ಅಪೀಲ್ ಹೋಗಿ ನಮ್ಮಗಿಂತ ಹೆಚ್ಚು ಬೆಲೆ ಕೊಟ್ಟು ನಾವು

ತೆತ್ತಂತಹ ಉದಾಹರಣೆ ಇಲ್ಲ. ಅದೊಂದು ಅನಿವಾರ್ಯ ಮತ್ತು ಈ ಎಲ್ಲಾ ಆಸ್‌ಪೆಕ್ಟ್ ಬಗ್ಗೆ ಚರ್ಚೆ ಮಾಡಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ: ಕ್ರಿಮಿನಲ್‌ಗೆ FIR ಏನು ಕಳಿಸುತ್ತದೆ, ಅದರಲ್ಲಿ ಲಿಮಿಟೆಡ್ ಪವರ್ ಅಫೆನ್ಸ್ ಆಗಿದೆಯೋ ಇಲ್ಲವೋ ಅಷ್ಟನ್ನು ಟ್ರಯಲ್ ಮಾಡುವುದಲ್ಲದೆ ಯಾವುದೇ ಮೆಟಿರಿಯಲ್ಸ್ ಅಥವಾ ವೆಹಿಕಲ್ಸ್‌ನ್ನು ಸೀಜ್ ಮಾಡಿರುವುದನ್ನು ಡಿಸ್‌ಪೋಜ್ ಮಾಡುವಂತಹ ಅಧಿಕಾರ ಆ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಇಲ್ಲ. ಇದು ತುಂಬಾ ಸ್ಪೆಸಿಫಿಕ್ ಆಗಿ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮತ್ತೆ ನಿಮಗೆ ನಾನು ಒಂದು ಗಮನಕ್ಕೆ ತರತಕ್ಕಂಥಾದ್ದು 31(4) ಓದಿ.

ಶ್ರೀ ಎಂ.ಪಿ. ಪ್ರಕಾಶ್: ಬಹಳ ಮೂಲಭೂತವಾಗಿ ಇರತಕ್ಕಂಥ ಕೆಲವೇ ವಿಚಾರವನ್ನು ಹೇಳುತ್ತೇನೆ. ಇಲ್ಲ, Sriram Reddy, I will not yield ಒಂದು ವಿಚಾರದಲ್ಲಿ ಅವರು ಎತ್ತಿರತಕ್ಕಂಥಾದ್ದು ಇಷ್ಟೇ. ಇವತ್ತು ಆಕ್ಷನ್ ಹಾಕುತ್ತೀರಿ ಅದಕ್ಕೆ ನೂರು ರೂಪಾಯಿ ಬೆಲೆ ಎಂದು ನಿರ್ಧಾರ ಆಗುತ್ತದೆ. ಅವರು aggrieved party ಮುಂದೆ ಮೇಲ್ಮನವಿಯನ್ನು ಮಾಡಿಕೊಳ್ಳುತ್ತಾನೆ. ಮೇಲ್ಮನವಿಯಲ್ಲಿ ನೀವು ಮಾಡಿರತಕ್ಕಂಥ ಕೇಸು ಫೇಲ್ ಆಗುತ್ತದೆ. ಆಗ ಆ ಮನುಷ್ಯ ಅವತ್ತಿನ ದಿವಸ ಆಕ್ಷನ್ ಮಾಡಿದಾಗ ಮಾರ್ಕೆಟ್‌ನ ದರ 500 ರೂಪಾಯಿ ನಷ್ಟವಾಗಿದ್ದರೆ, ಆ 400 ರೂಪಾಯಿ ಕಟ್ಟಿಕೊಡುವವರು ಯಾರು ಎನ್ನುವಂತಹ ವಿಷಯದಲ್ಲಿ ಚರ್ಚೆ ಮಾಡುತ್ತಿದ್ದೀರಿ. ಆ ಕಾರಣಕ್ಕಾಗಿ 36 ಕೆಳಗೆ ಏನು ಮಾಡಿದ್ದೇವೆಂದರೆ ಆ ಮನುಷ್ಯ he has to suffer that ಅವತ್ತಿನ ಮಾರ್ಕೆಟ್ ರೇಟ್‌ನಲ್ಲಿ ನಾವೇನು ಮಾಡಿರುತ್ತೇವೆ, ಈಗ ಅನೇಕ ಕಡೆಗೆ. certain materials cannot be produced before the Court as both of you have already said, with regard to the perishable articles ಅದನ್ನು ಸೀಜ್ ಮಾಡಿರುತ್ತೇವೆ. Perishable articles ಸೀಜ್ ಮಾಡಿದಾಗ ಏನು ಮಾಡುತ್ತೇವೆ? There is no compulsion under the Cr. PC that it has to be produced before the Court, before the witness for identification. Instead of that, there will be a cash or something else will be there. ಅದೇ ರೀತಿಯಾಗಿ Essential Commodities Act ನಲ್ಲಿ ಏನು ಮಾಡುತ್ತೇವೆ, seized commodities either it will be a bank guarantee or it will be something indemnity bond or it will be sold in auction ಅವತ್ತಿನ ಆಕ್ಷನ್ ರೇಟ್

ಏನಿರುತ್ತದೆ ಅದೇ ರೀತಿಯಾಗಿ ಇಲ್ಲಿ ಆಕ್ಷನ್ ರೇಟ್ ಅನ್ನು ಕಟ್ಟುತ್ತೇವೆ ಅಷ್ಟೆ. He has to suffer.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರೆ ಸೆಕ್ಷನ್ 31(4) ಒಂದು ಸಲ ಓದಿ ಬಿಡಿ.

ಶ್ರೀ ಎಂ.ಪಿ. ಪ್ರಕಾಶ್: ನಿಮಗೆ ಓದುವುದಕ್ಕೆ ಬರುವುದಿಲ್ಲವೆಂದರೆ ನಾನು ಓದುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಏಕೆ ನಾನು ಓದಿ ಎಂದು ಹೇಳಿದೆನೆಂದರೆ, ನೀವು ಹೇಳಿದಿರಲ್ಲಾ ಇಷ್ಟೊತ್ತು ಅದಕ್ಕೆ contradictory act 31(4) ಇದೆ. ಪ್ರಾಧಿಕೃತ ಅಧಿಕಾರಿಯು 2ನೇ ಉಪಕರಣದ ಅಡಿಯಲ್ಲಿ ವಶಪಡಿಸಿಕೊಳ್ಳಲಾದ ಆದೇಶವನ್ನು ಮಾಡಿದ ತರುವಾಯ ಹಾಗೇ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಿಂದ ಸರಿಯೆಂದು ಅಭಿಪ್ರಾಯಪಟ್ಟರೆ ಸಾರ್ವಜನಿಕ ಹರಾಜಿನ ಮೂಲಕ ಮುಟ್ಟುಗೋಲು ಹಾಕಿಕೊಂಡ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ ಮಾಡಬೇಕೆಂದು ಆದೇಶ ನೀಡಬಹುದು.

ಪ್ರಾಧಿಕೃತ ಅಧಿಕಾರಿಯು (2)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿಕೊಳ್ಳುವ ಆದೇಶವನ್ನು ಮಾಡಿದ ತರುವಾಯ, ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಿಂದ ಸೂಕ್ತ ಎಂದು ಅಭಿಪ್ರಾಯಪಟ್ಟರೆ, ಸಾರ್ವಜನಿಕ ಹರಾಜಿನ ಮೂಲಕ, ಮುಟ್ಟುಗೋಲು ಹಾಕಿಕೊಂಡ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ ಮಾಡಬೇಕೆಂದು ಆದೇಶ ನೀಡಬಹುದು. ಮುಟ್ಟುಗೋಲು ಹಾಕಿಕೊಳ್ಳಲಾದ ಕಾಕಂಬಿಯ ಸಂದರ್ಭದಲ್ಲಿ ಪ್ರಾಧಿಕೃತ ಅಧಿಕಾರಿಯು, ಲೈಸೆನ್ಸ್ ಪಡೆದ ಬಳಕೆದಾರನಿಗೆ, ಅಂಥ ಬಳಕೆದಾರನಿಗೆ ನಿಗಧಿಪಡಿಸಿದ ಪ್ರಮಾಣದೊಳಗೆ ಕೂಡಲೇ ಹಂಚಿಕೆ ಮಾಡತಕ್ಕದ್ದು ಮತ್ತು ಅಂಥ ಹಂಚಿಕೆಯ ವರದಿಯನ್ನು ಕಾಕಂಬಿ ನಿಯಂತ್ರಕನಿಗೆ ಕಳುಹಿಸಿಕೊಡತಕ್ಕದ್ದು. ಇದಕ್ಕೆ ತಾವು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್: ಏನಾಗಿದೆ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನೀವು ಹರಾಜು ಹಾಕಿಯೆಂದು ಕಳುಹಿಸುತ್ತೀರಿ. FIR ಅನ್ನು ಒಂದು ಕಡೆ ಕಳುಹಿಸುತ್ತೀರಿ. ಅವನಿಗೆ ಅಧಿಕಾರವನ್ನು ಕೊಟ್ಟಿರುವಂಥಾದ್ದನ್ನು ಇಲ್ಲಿ ಮತ್ತೆ delete ಮಾಡುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್: ತಾವು ವಕೀಲರು ಆಗಿದ್ದೀರಿ, FIR ಪ್ರಥಮ ವರ್ತಮಾನ ಪತ್ರಿಕೆಯನ್ನು ನಾವು ಕಳುಹಿಸಿಕೊಡುತ್ತೇವೆ. ಅಪರಾಧಿಗಳನ್ನು

ಸಾಧ್ಯವಾದರೆ ಅದರ ಕೆಳಗೆ ದಸ್ತಗಿರಿ ಮಾಡುತ್ತಾರೆ. ಅವರ ಮಾಲನ್ನೂ ಕೂಡ seize ಮಾಡಿಕೊಳ್ಳುತ್ತೇವೆ. ಆದರೆ FIR ಆಗಿದೆಯೆಂದ ತಕ್ಷಣವೇ, ಅವನು ಬಂದು Forest Act ಕೆಳಗಡೆ ನಾನು ಫೆನಾಲ್ಟಿಯನ್ನು ಕಟ್ಟುತ್ತೇನೆಂದು ಹೇಳುತ್ತಾನೆ. ಅವನು ಅದನ್ನು ಮಾಡಿದರೆ ನಾವು ಕಾಂಪೌಂಡ್ ಮಾಡುತ್ತೇವೆ, ಕಾಂಪೌಂಡ್, ಮಾಡಿದ್ದನ್ನು ನಾವು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ report ಮಾಡುತ್ತೇವೆ. ಇದರಲ್ಲಿ ತಪ್ಪು ಏನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕಾಂಪೌಂಡ್ ಮಾಡತಕ್ಕಂಥಾದ್ದು ಒಬ್ಬರು, ಕೇಸ್ ರಿಜಿಸ್ಟರ್ ಮಾಡುವಂಥದ್ದು ಇನ್ನೊಬ್ಬರಾ?

ಶ್ರೀ ಎಂ.ಪಿ. ಪ್ರಕಾಶ್: ಹೌದು.

Sri G.V. Srirama Reddy: When once the FIR sent to the Magistrate, all power lies with the Magistrate.

ಶ್ರೀ ಎಂ.ಪಿ. ಪ್ರಕಾಶ್: ಏನೂ ಇಲ್ಲ, ಕಾಂಪೌಂಡ್ ಮಾಡಬಹುದು, ಅಥಾರಿಟಿಸ್ ಇರುತ್ತವೆ, ಕಾಂಪೌಂಡ್ ಮಾಡಬಹುದು.

Sri K.G. BOPAIAH: There are so many decisions.

Sri M.P. PRAKASH: There are so many decisions.

ಶ್ರೀ ಕೆ.ಜಿ. ಬೋಪಯ್ಯ: ಏಕೆ, It is special statute. ಇದು ವಿಶೇಷ ಕಾನೂನು, ಅದರಲ್ಲಿ ಮುಖ್ಯವಾಗಿ ಅಪರಾಧವನ್ನು ಮಾಡುವುದೇ ಬೇರೆ, ಮೆಟೇರಿಯಲ್ಸ್‌ನದ್ದು ಮಾಡುವುದೇ ಬೇರೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಕಳಸಾ ಬಂಡೂರಿ ನಾಲಾಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟಿನ ನಿರ್ಣಯದ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪಮುಖ್ಯಮಂತ್ರಿಗಳು): ಒಂದು ನಿಮಿಷ, ಈಗ ಟಿ.ವಿ.ಯಲ್ಲಿ ಸುದ್ದಿ ಬರುತ್ತಿರುವಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಷ್ಟೆ, ಇದು ಕನ್‌ಫರ್ಮ್ ಆಗಲಿ ಪರವಾಗಿಲ್ಲ. ಕಳಸಾಬಂಡೂರಿ ನಾಲ ವಿಷಯ ಕುರಿತು ಗೋವಾ ಸರ್ಕಾರದವರು ಸುಪ್ರೀಂ ಕೋರ್ಟ್‌ಗೆ ಅರ್ಜಿಯನ್ನು ಹಾಕಿದ್ದರು. ಸುಪ್ರೀಂ ಕೋರ್ಟ್ ಅರ್ಜಿಯನ್ನು ವಜಾ ಮಾಡಿದೆಯೆಂದು ಟಿ.ವಿ.ಯಲ್ಲಿ ಬರುತ್ತಾ ಇದೆಯೆಂದು ಹೇಳಿದ್ದಾರೆ. ಅದು ನಾನು ಕನ್‌ಫರ್ಮ್ ಆಗಲಿ, ನಾನು ಬಂದಿರುವ ಸುದ್ದಿಯನ್ನು ಹೇಳಿದ್ದೇನೆ. ನಾನು ವಿಷಯವನ್ನು ಸದನದ ಗಮನಕ್ಕೆ ತರುವಂಥ ಪ್ರಯತ್ನವನ್ನು ಮಾಡಿದ್ದೇನೆ.